**ಓ ಎಸ್ ನಂಃ 367/2020**

**ಪಿ. ಡಬ್ಲ್ಯೂ : 1**

ದಿಃ **20.06.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು ಃ ಪ್ರತಿವಾದಿ **3, 6** ಮತ್ತು **7**ರವರ ಪರ ಶ್ರೀ ಸಿ ಡಿ ಪಿ ವಕೀಲರಿಂದ ಃ

ಐಟಂ ನಂಬರ್ 1 ಮತ್ತು 2 ಇವುಗಳು ನಮ್ಮ ತಾಯಿಗೆ ಸೇರಿದ ಆಸ್ತಿಯಾಗಿವೆ. ಸದರಿ ಸ್ವತ್ತುಗಳನ್ನು ನನ್ನ ತಾಯಿ ಸ್ವಯಾರ್ಜಿತವಾಗಿ ಕ್ರಯಕ್ಕೆ ಪಡೆದಿದ್ದಾರೆ. ಐಟಂ ನಂಬರ್ 3 ರ ಸ್ವತ್ತು ಪಿತ್ರಾರ್ಜಿತ ಸ್ವತ್ತು. ಜಯಮ್ಮ ನವರು 1980 ರಲ್ಲಿ ತೀರಿಕೊಂಡಿದ್ದಾರೆ. ನಮ್ಮ ತಂದೆ 1994 ರಲ್ಲಿ ತೀರಿಕೊಂಡಿರುತ್ತಾರೆ. ನನ್ನ ತಾಯಿ ತೀರಿಕೊಂಡ ನಂತರ ಐಟಂ ನಂಬರ್ 1 ರಿಂದ 3 ರ ಸ್ವತ್ತನ್ನು ಒಟ್ಟು ಕುಟುಂಬದಲ್ಲಿ ಇದ್ದುಕೊಂಡು ಅನುಭವಿಸಿಕೊಂಡು ಬರುತ್ತಿದ್ದೇವು. ನನ್ನ ತಂದೆ ತಾಯಿಗೆ 11 ಜನ ಮಕ್ಕಳು ಇದ್ದೇವೆ. ನಾವು 11 ಜನ ಮಕ್ಕಳನ್ನು ಬಿಟ್ಟರೇ ಬೇರೆ ಯಾರು ನನ್ನ ತಂದೆ ತಾಯಿಗೆ ವಾರಸುದಾರರು ಇರಲಿಲ್ಲ ಎಂದರೆ ಸರಿ. ನಮ್ಮ ತಂದೆ ತಾಯಿ ಬದುಕಿದ್ದಾಗ ಅಥವಾ ತೀರಿಕೊಂಡ ನಂತರ ನಮ್ಮ ಕುಟುಂಬದಲ್ಲಿ ಯಾವುದೆ ವಿಭಾಗ ಆಗಿಲ್ಲ ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಗಳಿಗೆಲ್ಲ ದಾವಾ ಸ್ವತ್ತಿನಲ್ಲಿ ಭಾಗ ಇದೆ ಎಂದರೆ ಸರಿ. 11 ನೆ ಪ್ರತಿವಾದಿಗೆ ಮಾರಾಟ ಮಾಡಿರುವ ಆಸ್ತಿಗೆ ಪ್ರತಿವಾದಿ 3,6 ಮತ್ತು 7 ರವರು ರುಜು ಮಾಡಿರುವುದಿಲ್ಲ. ದಾವಾ ಐಟಂ ನಂಬರ್ 3 ರಲ್ಲಿ ಪ್ರತಿವಾದಿ 3,6 ಮತ್ತು 7 ರವರಿಗೆ ಭಾಗ ಇದೆ ಎಂದರೆ ಸರಿ.

ಮರುವಿಚಾರಣೆ ಃ ಇಲ್ಲ

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,

ಮಾಗಡಿ.